ಪ್ರಸ್ತಾವದ ಅಂಗೀಕಾರ

ಶ್ರೀ ಕೆ.ಹೆಚ್. ಪಾಟೀಲ್ (ಮಾನ್ಯ ಸಹಕಾರ ಖಾತೆ ಸಚಿವರು): ಮಾನ್ಯ ಉಪಾಧ್ಯಕ್ಷಿಣಿಯವರೆ, "1991ನೇ ಇಸವಿಯ ಕರ್ನಾಟಕ ವ್ಯವಸಾಯೋತ್ಪನ್ನ ಮಾರುಕಟ್ಟೆ (ನಿಯಂತ್ರಣ) ಮತ್ತು ಕೆಲವು ಇತರೇ ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಿಣಿಯವರು: ಪ್ರಸ್ತಾವ ಏನೆಂದರೆ:

"1991ನೇ ಇಸವಿಯ ಕರ್ನಾಟಕ ವ್ಯವಸಾಯೋತ್ಪನ್ನ ಮಾರುಕಟ್ಟೆ (ನಿಯಂತ್ರಣ) ಮತ್ತು ಕೆಲವು ಇತರೇ ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ 1991

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷಿಣಿಯವರೆ, 1991ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷಿಣಿಯವರೇ ಈ ಕರ್ನಾಟಕ ಲ್ಯಾಂಡ್ ರೆವಿನ್ಯೂ ಅಮೆಂಡ್‌ಮೆಂಟ್ ಬಿಲ್ 1991, ಇದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇದರಲ್ಲಿ ವಿಶೇಷವಾಗಿ ಎಕ್ಸ್‌ಪ್ಲೈನ್ ಮಾಡತಕ್ಕಂಥದ್ದು ಏನೂ ಇಲ್ಲ. ಈ ಸಮಿತಿಯಲ್ಲಿ ಮೊದಲು ಮೂರು ಜನ ಸದಸ್ಯರು ಇದ್ದರು. ತಹಸಿಲ್ದಾರರಿಗೆ ಸೆಕ್ರೆಟರಿ ಎಂದು ಮಾಡಿದ್ದೆವು. ಕಾನೂನು ಸಲಹೆ ಕೊಡಬೇಕು ಅದೆಲ್ಲವನ್ನು ಕೊಡಬೇಕೆಂದರೆ ಲಾ ಡಿಪಾರ್ಟ್‌ಮೆಂಟ್‌ನವರು ನಮಗೆ ಸಲಹೆ ಮಾಡಿದರು ಅವರು ಮೆಂಬರ್ ಸೆಕ್ರೆಟರಿಯಾಗಿ ಇದ್ದರೆ ಸಲಹೆಯನ್ನು ಕೊಡುವುದಕ್ಕಾಗುತ್ತದೆ, ನಾಳೆ ಕಾನೂನಿಗೆ ವಿರುದ್ಧವಾಗಿ ಯಾವುದೇ ಮೆಂಬರ್ ಮಾಡಿದರೂ ಕೂಡ ಕನಿಷ್ಟ ಪಕ್ಷ ಅವರಾದರೂ ಪಾಯಿಂಟ್‌ಔಟ್ ಮಾಡುವುದಕ್ಕೆ ಅನುಕೂಲವಾಗುತ್ತದೆನ್ನುವ ದೃಷ್ಟಿಯಿಂದ ಅವರು ನಮಗೆ ಸಲಹೆ ಕೊಟ್ಟಮೇಲೆ ಈ ತಿದ್ದುಪಡಿಯನ್ನು ತಂದಿದ್ದೇವೆ. ಅದಕ್ಕೆ ಎಲ್ಲ ಮಾನ್ಯ ಸದಸ್ಯರು, ಎಂ.ಎಲ್.ಎ.ರವರು ಬರಿ ಸೆಕ್ರೆಟರಿ ಆಗಿದ್ದರೆ ತಾಲ್ಲೂಕು ಪಂಚಾಯತಿ ಛೇರ್‌ಮನ್ ಯಾರು ಇದ್ದಾರೆ, ಯಾರಿಗೆ ಬಹುಭಾಗ ಬರುತ್ತದೆ ಆ ತಾಲ್ಲೂಕಿನಲ್ಲಿ ಅವರೇ ಇದಕ್ಕೆ ಛೇರ್‌ಮನ್ ಆಗುತ್ತಾರೆ. ಎಲ್ಲಿ ಮಿನಿಸ್ಟರ್ ಇರುತ್ತಾರೆ, ಅಥವಾ ಸದಸ್ಯರು ಬೇಡವೆಂದು ಹೇಳುತ್ತಾರೆ. ಅಂಥ ಕಡೆ ನಾಮಿನೇಟ್ ಮಾಡಿದಂಥವರೇ ಛೇರ್‌ಮನ್ ಮಾಡುತ್ತಾರೆ. ಅದಕ್ಕೆ ತಾವು ಎಲ್ಲರೂ ಕೂಡ ಒಪ್ಪುತ್ತೀರೆಂದು ಭಾವಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ: ಮಾನ್ಯ ಉಪಾಧ್ಯಕ್ಷಿಣಿಯವರೇ ಇದನ್ನು ಜಾಸ್ತಿ ಮಾಡತಕ್ಕಂಥ ಔಚಿತ್ಯವೇನೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ತಹಶೀಲ್ದಾರರು ಅಲ್ಲಿ ಇದ್ದುಕೊಂಡು ಏನು ಮೆಂಬರ್ ಸೆಕ್ರೆಟರಿಯಾಗಿ ಮಾಡಬಹುದಿತ್ತೋ ಅದೇ ಕೆಲಸವನ್ನು ಇವರು ಮಾಡಬಹುದಾಗಿತ್ತು. ಅಡ್ವೈಸ್ ಮಾಡಬಹುದಾಗಿತ್ತು, ಇದೇನು ಹೊಸದಾಗಿ ಬಂದಿಲ್ಲ. ಲ್ಯಾಂಡ್‌ಗ್ರಾಂಟ್ ಕಮೀಷನ್ ಎಂದು ಹಿಂದಿನಿಂದಲೂ ಕೆಲಸ ಮಾಡಿಕೊಂಡು

ಬರುತ್ತಿದೆ. ನಮ್ಮಲ್ಲಿ ಲ್ಯಾಂಡ್ ಬಹಳಷ್ಟು ಉಳಿದಿಲ್ಲ. ಇದು ಇರುವುದು ಎನ್‌ಕ್ರೋಚ್ ಮಾಡಿರುವುದು ಮಾತ್ರ, ಡಿಸ್‌ಫೋಸ್ ಮಾಡಲಿಕ್ಕೆ ಕಮಿಟಿಯಾಗಬೇಕು. ಈಗ ಜಾಸ್ತಿ ಮಾಡುವುದರಿಂದ ಏನಾಗುತ್ತದೆಂದರೆ ಇನ್ನೊಬ್ಬ ತಮ್ಮ ಪಾರ್ಟಿ ಕಾರ್ಯಕರ್ತನನ್ನು ಜಾಸ್ತಿಮಾಡಿಕೊಂಡಹಾಗೆ ಆಯಿತು. ಮೂರು ಇದ್ದುದನ್ನು 5 ಮಾಡಿದ್ದೀರಿ. ಒಬ್ಬರು ತಹಸೀಲ್ದಾರರಿದ್ದುದನ್ನು ಇನ್ನೊಬ್ಬರು ಜಾಸ್ತಿ ಮಾಡಿದಂತಾಯಿತು. ಮಾಡಕೊಳ್ಳಿ 5 ಅಲ್ಲ 11-13 ಮಾಡಿಕೊಳ್ಳಿ, ಎಷ್ಟು ಬೇಕಾದರೂ ಮಾಡಿಕೊಳ್ಳಿ, ಬೇಡವೆಂದು ಹೇಳುವುದಿಲ್ಲ. ಅದರೆ ಇವರನ್ನು ಮಾಡುವಾಗ ಅವರ ಚರಿತ್ರೆಯನ್ನು ತಿಳಿದುಕೊಂಡು ಹಾಕಿ. ಹರಾಜು ಹಾಕುವವರನ್ನು ಹಾಕಿದರೆ ಕೆಟ್ಟ ಹೆಸರು ಬರುತ್ತದೆ, ಬಡವ ಹಾಳಾಗುತ್ತಾನೆ. ನಾವು ಬೇಡವೆಂದರೂ ನೀವು ಹಾಕಿಕೊಳ್ಳುತ್ತೀರಿ. ಅದೇನೇನೊ ಮಾಡಬೇಕೆಂದು, ಎಷ್ಟೆಷ್ಟು ಸೂಯಿಸೈಡ್ ಮಾಡಿಕೊಳ್ಳುತ್ತೀರೋ ಅಷ್ಟಷ್ಟು ಮಾಡಿಕ್ಕೊಳ್ಳಿ, ಬೇಡವೆಂದು ಹೇಳುವುದಿಲ್ಲ. ಅದರೆ ಯಾರನ್ನು ಹಾಕುತ್ತೀರೋ ಅವರ ಬಯೋಡೇಟಾ ತೆಗೆದುಕೊಂಡು ಕೈಯಿ ಬಾಯಿ ಶುದ್ಧವಾಗಿರತಕ್ಕಂಥವರನ್ನು ಹಾಕಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆಯವರೇ ಈ ಒಂದು ಕಂದಾಯ ತಿದ್ದುಪಡಿ ವಿಧೇಯಕ ಏನು ಬಂದಿದೆ, ಇದರ ಪ್ರಕಾರ ಮೂರುಜನ ಇದ್ದುದನ್ನು ಐದು ಜನ ಸದಸ್ಯರು ಇರತಕ್ಕಂಥದ್ದು ಎಂದು ಮಾಡಿದ್ದೀರಿ.ಈ ಭೂಮಿ ಮಂಜೂರಾತಿಗಾಗಿ ಒಂದು ಸಮಿತಿ. ನಾನು ಇದೇ ಸಂದರ್ಭದಲ್ಲಿ ಭೂ ನ್ಯಾಯ ಮಂಡಲಿಯ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ರಾಜ್ಯದಲ್ಲಿ ಭೂ ನ್ಯಾಯ ಮಂಡಲಿ ರಚನೆಯಾಯಿತು. ಇತ್ತೀಚೆಗೆ ಸುಮಾರು 60-70 ತಾಲ್ಲೂಕುಗಳಲ್ಲಿ ಆಗಿರಬೇಕು ಎಂಡೆನಿಸುತ್ತದೆ. ಇನ್ನೂ ಕೆಲವು ಕಡೆ ಆಗಬೇಕಾಗಿದೆ. ಹಿಂದೆ ಈ ಸಭೆಯಲ್ಲಿ ಇವುಗಳ ಬಗ್ಗೆ ನಾನು ತಮ್ಮ ಗಮನಕ್ಕೆ ತಂದಿದ್ದೆ. ಅದರಲ್ಲಿ ಎಲ್ಲರನ್ನೂ ಬರೀ ಕಾಂಗ್ರೆಸ್‌ನವರನ್ನೇ ಹಾಕಿದ್ದಾರೆ, ಭೂ ನ್ಯಾಯ ಮಂಡಲಿಗಳಲ್ಲಿ ನ್ಯಾಯ ದೊರಕಬೇಕೆಂದು ಹೇಳಿ ಒಂದು ವಿಚಾರ ಇರುವಾಗ ಎರಡು ಕಡೆ ಒಂದು ಹಳ್ಳಿಯಲ್ಲಿ ಒಂದು ತಾಲ್ಲೂಕ್ಕಿನಲ್ಲಿ ಒಬ್ಬ ಬೇರೊಂದು ಪಕ್ಷದವರಾದರೆ ಕಾಂಗ್ರೆಸ್ ವಿರುದ್ಧವಾದಂಥ ಪಕ್ಷದವನಿಗೆ ನ್ಯಾಯ ದೊರಕುತ್ತದೆಯೇ? ಕಾಂಗ್ರೆಸ್‌ನವರಿಂದ ನ್ಯಾಯ ಸಿಗುತ್ತದೆಯೇ ಹೇಳಿ. ಅದರಿಂದ ಏನಾಗುತ್ತದೆಂದರೆ ಕಾಂಗ್ರೆಸ್ ಪಕ್ಷದ ನ್ಯಾಯ ಮಂಡಲಿಗಳನ್ನು ಮಾಡಿಕೊಂಡಿದ್ದಾರೆ ಹೊರತು ಭೂನ್ಯಾಯ ಮಂಡಲಿ ಎಂದು ಹೇಳಿಕೊಂಡು ನ್ಯಾಯ ದೊರಕುವ ಬದಲಾಗಿ ಕಾಂಗ್ರೆಸ್ ನ್ಯಾಯ, ಕಾಂಗ್ರೆಸ್ ತೀರ್ಪು ಸಿಗುವುದರಿಂದ ಇವುಗಳನ್ನು ಕಾಂಗ್ರೆಸ್ ಭೂನ್ಯಾಯ ಮಂಡಲಿ ಎಂದು ಕರೆಯಬೇಕಾಗುತ್ತದೆ. ತಾವು ಕಾನೂನು ಸಚಿವರು ತಮ್ಮ ಮೂಲಕ ಈ ಬಗ್ಗೆ ಹೇಳಿಕೆ ಬರಬೇಕು. ..

ಶ್ರೀ ಎಲ್.ಆರ್. ಶಿವರಾಮೇಗೌಡ : ಬಹಳ ಜನ ಪ್ರಜಾಪ್ರಭುತ್ವ ಮೌಲ್ಯಾಧಾರಿತ ರಾಜಕಾರಣಿಗಳು ಅವರೆಲ್ಲರೂ ಹೇಳಿದ್ದುದು ಇದೆ.

ಶ್ರೀ ವಾಟಾಳ್ ನಾಗರಾಜ್ : ಹಿಂದಿನವರು ಮಾಡಿದರು. ಅವರೆಲ್ಲರೂ ಸಮುದ್ರಕ್ಕೆ ಬಿದ್ದರು. ನೀವು ಎಲ್ಲಿ ಹೋಗುತ್ತೀರಿ? ನೀವು ಬೀಳುವುದಕ್ಕೆ ತಯಾರಾಗಿದ್ದೀರಾ? ನೀವು ಬೀಳುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ಪ್ರತಿಯೊಂದಕ್ಕೆ ಈ ಸಭೆಯಲ್ಲಿ ಏನು ನಡೆಯುತ್ತಿದೆ ಎಂದರೆ, ಎದ್ದರೆ ಸಾಕು ನೀವು ಏನು ಮಾಡಿದಿರಿ ಎನ್ನುವುದು. ನಾವು ಮಾಡಿಯೇ ಈ ಕಡೆ ಬಂದು ಕುಳಿತಿದ್ದೇವೆ. ನೀವು ಏನು ಮಾಡುತ್ತಿದ್ದೀರಿ ಎಂದು ಜನರಿಗೆ ಹೇಳಿ. ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ ಅಂದ ಹಾಗೆ ಆ ಪದ್ಧತಿಯನ್ನು ಅನುಸರಿಸಬೇಡಿ. ಇವತ್ತು ನೀವು ಏನು ಮಾಡುವುದಕ್ಕೆ ಹೊರಟದ್ದೀರಿ ಅಂದರೆ ನಿಮ್ಮ ಪಕ್ಷದ ಸಮಿತಿಗಳನ್ನು ಮಾಡಿಕೊಳ್ಳುವುದಕ್ಕೆ ಹೊರಟಿದ್ದೀರಿ. ಈ ರೀತಿ ನೀವು 5 ಜನರನ್ನು ಮಾಡುವುದಕ್ಕೆ

ಹೊರಟಿರುವುದು ಸರಿಯಲ್ಲ. ಮಾನ್ಯ ಖರ್ಗೆಯವರ ಬಗ್ಗೆ ಒಳ್ಳೆಯ ಅಭಿಪ್ರಾಯ ಇದೆ. ವಿಶ್ವಾಸ ಇದೆ. ಗೌರವ ಇದೆ. ಆದರೆ ಅವರು ಏತಕ್ಕೆ ಹೀಗೆ ಮಾಡುತ್ತಿದ್ದಾರೋ ಗೊತ್ತಿಲ್ಲ. ನನ್ನ ಕ್ಷೇತ್ರದ ಭೂನ್ಯಾಯ ಮಂಡಲಿಯಲ್ಲಿ ಇಂಥಿಂಥವರನ್ನು ಹಾಕಬೇಕೆಂದು ಹಿಂದುಳಿದ ವರ್ಗದ ಜನರ ಪಟ್ಟಿಯನ್ನು ಕೊಟ್ಟಿ. ನನ್ನ ಪಟ್ಟಿಯ ಒಂದು ಹೆಸರೂ ಅದರಲ್ಲಿ ಇಲ್ಲ. ನನ್ನ ಹೆಸರನ್ನು ಇಟ್ಟುಕೊಂಡಿದ್ದೀರಿ, ಅದನ್ನು ಯಾವಾಗ ತೆಗೆಯುತ್ತಿರೋ ಗೊತ್ತಿಲ್ಲ.

ಶ್ರೀ ಮಲ್ಲಾರೀಗೌಡ ಎಸ್. ಪಾಟೀಲ್ : ಅದರಲ್ಲಿ ಯಾರಾದರೂ ಕಾಂಗ್ರೆಸ್ಸಿನವರು ಇದ್ದರೆ? ತಾವು ಕೊಟ್ಟ ಪಟ್ಟಿಯಲ್ಲಿ ಜನತಾ ಪಕ್ಷದವರು ಅಥವಾ ಕಾಂಗ್ರೆಸ್ಸಿನವರು ಇದ್ದರೆ? ಇಲ್ಲದಿದ್ದರೆ ಏತಕ್ಕೆ ನಾಗರಾಜು ಅವರ ಪಾರ್ಟಿ ಎಂದು ಹೇಳಬಾರದು?

ಶ್ರೀ ವಾಟಾಳ್ ನಾಗರಾಜ್: ನಾನು ಕೊಟ್ಟದ್ದು ಹೆಸರುಗಳು ಯಾವುದೇ ಪಕ್ಷಕ್ಕೆ ಸೇರಿದವರಲ್ಲ ಹಿಂದುಳಿದ ವರ್ಗದವರ ಹೆಸರನ್ನು ಕೊಟ್ಟಿದ್ದೇನೆ. ಆದರೆ ಅದನ್ನು ಸೇರಿಸಿಲ್ಲ. ಆದರೂ ಚಿಂತೆ ಇಲ್ಲ. ಇದರಲ್ಲಿ 5 ಜನರನ್ನು ಹಾಕುವುದಕ್ಕೆ ಹೊರಟಿದ್ದೀರಿ. ನಿಮ್ಮ ಕಾರ್ಯಕರ್ತರನ್ನು, ಪಕ್ಷದ ಸದಸ್ಯರನ್ನು ಪ್ರೀತಿ ಮಾಡುವುದರಿಂದ ಅವರನ್ನು ಅಲ್ಲಿ ತುಂಬತಕ್ಕ ಪರಿಸ್ಥಿತಿ ಬರುತ್ತದೆ. ದಯವಿಟ್ಟು ಯಾವುದೋ ಒಂದು ಪಕ್ಷದ ಸಮಿತಿಯಾಗಿ ಅಥವಾ ಸರ್ಕಾರದ ಏಜೆಂಟ್ ಆಗಿ ಇದನ್ನೂ ಮಾಡುವುದಕ್ಕೆ ಹೋಗಬಾರದೆಂದು ಹೇಳುತ್ತೇನೆ. ಐದು ಜನರನ್ನು ಹಾಕುವುದಕ್ಕೆ ಏನು ಹೊರಟಿದ್ದೀರಿ ಇದರಲ್ಲಿ ವಿರೋಧ ಪಕ್ಷದವರನ್ನು ಒಬ್ಬರಿಬ್ಬರನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಬಿ.ಎಚ್. ಬನ್ನಿಕೋಡ್ : ಮಾನ್ಯ ಉಪಾಧ್ಯಕ್ಷೆಯವರೆ. ಮಾನ್ಯ ಕಂದಾಯ ಸಚಿವರು ಬಹಳ ಹಿರಿಯರು. ಅವರ ಬಗ್ಗೆ ಎಲ್ಲರಿಗೂ ಗೌರವ ಇದೆ. ಆದರೆ ಈಗ ಏನು ತಿದ್ದುಪಡಿ ತಂದು 3 ರಿಂದ 5 ಎಂದು ಮಾಡುತ್ತಿದ್ದೀರಿ ಇದು ನಿಮ್ಮ ಕಾರ್ಯಕರ್ತರನ್ನು ತೃಪ್ತಿ ಪಡಿಸುವುದಕ್ಕೆ ನಿಮ್ಮ ಪಕ್ಷದ ಸದಸ್ಯರನ್ನು ತೃಪ್ತಿಪಡಿಸುವುದಕ್ಕೆ ತಂದ ತಿದ್ದುಪಡಿಯೇ ಹೊರತು ಜನರ ಹಿತದೃಷ್ಟಿಯಿಂದ ತಂದದ್ದಲ್ಲವೆಂದು ನಾನು ಹೇಳಬೇಕಾಗುತ್ತದೆ. ಏಕೆಂದರೆ ಹಿಂದೆ ತಹಶೀಲ್ದಾರರು ಭೂ ನ್ಯಾಯ ಮಂಡಲಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಈಗಲೂ ಮಾಡಬಹುದಾಗಿತ್ತು. ಈಗ ಈ ತಿದ್ದುಪಡಿ ತಂದು ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಅಲ್ಲಿ ಒಂದೇ ಪಕ್ಷದವರನ್ನು ಇಟ್ಟು ಅದಕ್ಕೆ ಭೂ ನ್ಯಾಯ ಮಂಡಲಿ ಎಂದು ಹೇಳುವುದಾಗಲಿ ಅಥವಾ ಭೂಮಿಯನ್ನು ಮಂಜೂರ್ಮಾಡತಕ್ಕ ಒಂದು ಸಮಿತಿ ಎಂದು ಹೇಳಿದರೆ ಅರ್ಥಹೀನ. ಕೇವಲ ಒಂದುಪಕ್ಷದ ಹಿತದೃಷ್ಟಿಯನ್ನು ಕಾಪಾಡಬಹುದು. ಅಲ್ಲಿ ಅನೇಕ ರೀತಿಯ ಭ್ರಷ್ಟಾಚಾರಕ್ಕೆ ಆಸ್ಪದವಾಗುವ ರೀತಿಯಲ್ಲಿ ಸಮಿತಿಗಳನ್ನು ಮಾಡುತ್ತಿದ್ದಾರೆ. ಏತಕ್ಕೆ ಹೇಳುತ್ತಿದ್ದೇನೆಂದರೆ ನನ್ನ ತಾಲ್ಲೂಕಿನಲ್ಲಿ ಭೂನ್ಯಾಯ ಮಂಡಲಿಯನ್ನು ರಚಿಸಿದ್ದಾರೆ, 9 ದಿನಗಳಲ್ಲಿ 8 ಕಮಿಟಿಗಳನ್ನು ಬದಲಾವಣೆ ಮಾಡಿದ್ದಾರೆ, ಈ ಸರ್ಕಾರದವರು. ಅವರು 28-2-91ಕ್ಕೆ ಒಂದು ನಾಮಿನೇಷನ್ ಮಾಡಿದರು. ಮತ್ತೆ 2-3-91ಕ್ಕೆ ಅದನ್ನು ರದ್ದುಪಡಿಸಿ ಮತ್ತೊಂದು ಮಾಡಿದರು, ಈಗ ಪುನಃ ಇನ್ನೊಂದು ಮಾಡುತ್ತಿದ್ದಾರೆ. ಮಾನ್ಯ ಜಾಲಪ್ಪನವರು ಹೇಳಿದ ಹಾಗೆ ನಿಮ್ಮವರೇ ಇದ್ದರೂ ಅಡ್ಡಿ ಇಲ್ಲ. ಆದರೆ ಜನರಿಗೆ ಹಿತ ಮಾಡುವವರನ್ನು, ಸಮಾಜದ ಕಾರ್ಯಕರ್ತರನ್ನು ಹಾಕಿ. ಏನೋ ಒಂದು ಒತ್ತಡಕ್ಕೆ, ರಾಜಕೀಯ ಲಾಭಕ್ಕಾಗಿ ಬಂದವರಿಗೆ ಮತ್ತು ಜನರಿಗೆ ಹಿತ ಮಾಡದವರನ್ನು ದಯವಿಟ್ಟು ಸಚಿವರು ನೇಮಕ ಮಾಡಬಾರದು ಎಂಬ ಮಾತನ್ನು ವಿನಂತಿಪೂರ್ವಕವಾಗಿ ಹೇಳುತ್ತೇನೆ. ಭೂನ್ಯಾಯ ಮಂಡಲಿ ಇರಲಿ ಯಾವುದೇ ಇರಲಿ ನ್ಯಾಯ ಯಾಚಿಸಿ ಬರುವ ಜನರಿಗೆ ಆತ್ಮವಿಶ್ವಾಸ ಇವತ್ತು ಸರ್ಕಾರದಲ್ಲಿ ಮತ್ತು ನ್ಯಾಯ ಮಂಡಲಿಯಲ್ಲಿ ಉಳಿದಿಲ್ಲ. ಆದ್ದರಿಂದ ಇಂಥ ತಿದ್ದುಪಡಿ ತಂದು 5 ಜನರನ್ನು ನೇಮಿಸುವುದರಿಂದ,

ಸಂಖ್ಯೆಯನ್ನು ಹೆಚ್ಚು ಮಾಡುವುದರಿಂದ ಇನ್ನಷ್ಟು ಅಲ್ಲಿ ಅವ್ಯವಹಾರಕ್ಕೆ ಆಸ್ಪದವಾಗುತ್ತದೆಯೇ ವಿನಹ ಯಾವುದೇ ಪ್ರಯೋಜನ, ಸಾರ್ವಜನಿಕ ಹಿತಾಸಕ್ತಿ ಆಗುವುದಿಲ್ಲ. ಎಂದು ಹೇಳಿ ಇದನ್ನು ವಿರೋಧ ಮಾಡುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಈಗಾಗಲೇ ಚುನಾವಣೆ ಘೋಷಣೆ ಮಾಡಿರುವುದರಿಂದ ಈಗಲೇ ಇದನ್ನು ಅನೌನ್ಸ್ ಮಾಡುತ್ತೀರೋ ಅಥವಾ ಚುನಾವಣೆ ಆದಮೇಲೆ ಮಾಡುತ್ತೀರೋ? 5 ಜನರ ಲ್ಯಾಂಡ್ ಡಿಸ್ಟ್ರಿಬ್ಯೂಷನ್ ಕಮಿಟಿ ಮಾಡುತ್ತಿದ್ದೀರಿ, ಚುನಾವಣೆ ಆದಮೇಲೆ ಇದರ ಹೆಸರುಗಳನ್ನು ಅನೌನ್ಸ್ ಮಾಡುತ್ತೀರೋ ಅಥವಾ ಮೊದಲು ಮಾಡುತ್ತೀರೋ? ದಯವಿಟ್ಟು ಉತ್ತರ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಚರ್ಚೆ ಮುಗಿಯಲಿ, ನಂತರ ಹೇಳುತ್ತೇನೆ.

ಉಪಾಧ್ಯಕ್ಷರು : ಸಿಂಧ್ಯಾ ಅವರು ಮಾತನಾಡಿದ ಮೇಲೆ (ಶ್ರೀ ರಾಯರೆಡ್ಡಿ) ಮಾತನಾಡಿ.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) : ಸನ್ಮಾನ್ಯ ಉಪಾಧ್ಯಕ್ಷೆಯವರೆ, ಮಾನ್ಯ ಕಂದಾಯ ಮಂತ್ರಿಗಳು ಕರ್ನಾಟಕ ಭೂ ಕಂದಾಯ ತಿದ್ದುಪಡಿ ವಿಧೇಯಕವನ್ನು ತಂದು ಮೂರು ಅಧಿಕಾರೇತರ ಸದಸ್ಯರು ಇದ್ದುದನ್ನು 5 ಜನ ಮಾಡಿ ಇಬ್ಬರನ್ನು ಹೆಚ್ಚಿಗೆ ಮಾಡುತ್ತಿದ್ದಾರೆ. ಈ ಸದಸ್ಯರನ್ನು ಹೆಚ್ಚಿಗೆ ಮಾಡುವುದರಿಂದ ಸರ್ಕಾರದ ಬೊಕ್ಕಸಕ್ಕೆ 20 ಲಕ್ಷ ರೂಪಾಯಿ ವೆಚ್ಚ ಆಗುತ್ತದೆ. ಅವರ ಟಿ.ಎ.,ಡಿ.ಎ. ಎಲ್ಲಾ ಸೇರಿ. ಈ 20 ಲಕ್ಷ ರೂಪಾಯಿ ಹೆಚ್ಚುವರಿ ಆಗುವುದರಿಂದ ಈ ಸಮಿತಿಯಲ್ಲಿ ಅಧಿಕಾರೇತರ ಸದಸ್ಯರ ಅವಶ್ಯಕತೆ ಇಲ್ಲ, ಬರಗಾಲ ಇದೆ. ಕುಡಿಯುವ ನೀರಿಲ್ಲ, ಕೊಡುವುದಕ್ಕೆ ಹಣ ಇಲ್ಲ. ಬಹಳಷ್ಟು ಟ್ರೆಜರಿ ಬಿಲ್‌ಗಳು ಹಾಗೆಯೇ ನಿಂತಿವೆ. ಇಂಥ ಪರಿಸ್ಥಿತಿಯಲ್ಲಿ ಮತ್ತೆ 20 ಲಕ್ಷ ರೂಪಾಯಿ ಹೊರೆಯಾಗುತ್ತದೆ. ಅದಕ್ಕೆ 5 ಜನರ ಬದಲು, ಅಲ್ಲಿ ಒಬ್ಬ ಎಂ.ಎಲ್.ಎ. ಇದ್ದಾರೆ, ಅದರ ಜೊತೆ ಸ್ಥಳೀಯ ಅಧಿಕಾರಿಗಳೊಬ್ಬರನ್ನು ನಾಮಿನೇಟ್ ಮಾಡಿ. ಟಿ.ಎ., ಡಿ.ಎ ಬೇಡ. ಇಲ್ಲದಿದ್ದರೆ ಖರ್ಗೆಯವರು ತಮ್ಮ ಪಕ್ಷದ ಕಾರ್ಯಕರ್ತರನ್ನು ತೃಪ್ತಿ ಮಾಡುವುದಕ್ಕೆ ಹೊರಟ ಹಾಗೆ ಆಗುತ್ತದೆ. ಇದರಿಂದ ಪ್ರಯೋಜನ ಆಗುವುದಿಲ್ಲ. ಅಲ್ಲಿ ಯಾವುದೇ ರೀತಿ ವ್ಯವಹಾರಗಳು ಸಲೀಸಾಗಿ ನಡೆಯುವುದಿಲ್ಲ. ಭ್ರಷ್ಟಾಚಾರಕ್ಕೂ ಅವಕಾಶವಾಗುತ್ತದೆ. ಮತ್ತು ಅನಾವಶ್ಯಕವಾಗಿ 20 ಲಕ್ಷ ರೂಪಾಯಿ ಹೊರೆ ಸರ್ಕಾರದಿಂದ ತೆರಿಗೆದಾರರ ಮೇಲೆ ಬೀಳುತ್ತದೆ. ಇದು ಬಹಳ ಅನ್ಯಾಯ. 5 ಜನ ಇದ್ದುದನ್ನು ಒಬ್ಬರನ್ನು ಮಾಡಿ. ನೀವು ಹೇಳಬಹುದು ನಿಮ್ಮ ಸರ್ಕಾರ ಇದ್ದಾಗ ಮಾಡಿದ್ದೀರಿ ಎಂದು. ನಮ್ಮ ಸರಕಾರ ಇದ್ದಾಗ ತಪ್ಪು ಮಾಡಿದ್ದರೆ ಅದನ್ನು ತಿದ್ದುಪಡಿ ಮಾಡಿಕೊಳ್ಳಬಹುದು. ಆದ್ದರಿಂದ ದಯವಿಟ್ಟು 5 ಸದಸ್ಯರ ಬದಲು ಒಬ್ಬರು ಎಂ.ಎಲ್.ಎ. ಒಬ್ಬ ಅಧಿಕಾರೇತರ ಸದಸ್ಯರನ್ನು ಮಾಡಿ. ಬೇಕಾದರೆ ಪರಿಶಿಷ್ಟ ಜಾತಿಯವರನ್ನೇ ಮಾಡಿ. ಒಬ್ಬ ಪರಿಶಿಷ್ಟ ಜಾತಿ ಅಧಿಕಾರೇತರ ಸದಸ್ಯ ಎಂ.ಎಲ್.ಎ. ಮತ್ತು ಒಬ್ಬ ಅಧಿಕಾರಿ ಮೂವರು ಕುಳಿತು ತೀರ್ಮಾನ ಮಾಡಿದರೆ ಬೇರೆ ಪಾರ್ಟಿ ಎಂ.ಎಲ್.ಎ. ಇದ್ದರೂ ಅದರಿಂದ ತೊಂದರೆಯಾಗುವುದಿಲ್ಲ. ಅದಕ್ಕೆ ಇದನ್ನು ಮರುಪರಿಶೀಲನೆ ಮಾಡಬೇಕೆಂದು ಹೇಳಿ ಇದಕ್ಕೆ ವಿರೋಧ ವ್ಯಕ್ತ ಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷೆಯವರೆ, ಇದನ್ನು ನಮ್ಮ ಕಾರ್ಯಕರ್ತರನ್ನು ಸದಸ್ಯರನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ನಾನು ತಂದಿಲ್ಲ. ನಿಜ ಹೇಳಬೇಕಾದರೆ. ಸಹಜವಾಗಿ ಕಮಿಟಿ ಮಾಡುವಾಗ ಯಾವ ಪಕ್ಷ ಅಧಿಕಾರದಲ್ಲಿರುತ್ತದೆಯೋ ಆ ಪಕ್ಷದ ಸದಸ್ಯರನ್ನು ನೇಮಿಸುತ್ತದೆ. ನಮ್ಮ ಸರ್ಕಾರ ಇರಬಹುದು. ನಿಮ್ಮ ಸರ್ಕಾರ ಇರಬಹುದು. ನಾಳೆ

ನಮ್ಮ ರುಕ್ಮಯ್ಯ ಪೂಜಾರಿಯವರ ಸರ್ಕಾರ ಬರಬಹುದು. ಯಾವುದೇ ಸರ್ಕಾರ ಬಂದರೂ ಕೂಡ .....

ಶ್ರೀ ಬಿ.ಎಚ್. ಬನ್ನಿಕೋಡ್ : ಯಾರೇ ಮಾಡಲಿ, ಪಕ್ಷದ ಸದಸ್ಯರನ್ನು ನ್ಯಾಯಮಂಡಲಿಗೆ ನೇಮಿಸುವುದು ಯೋಗ್ಯ ಅನ್ನುತ್ತೀರಾ? ಅದು ನ್ಯಾಯಯುತ ಎಂದು ಹೇಳುತ್ತೀರಾ? ತಾವು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮಗೂ ಗೊತ್ತಿದೆ. 74ನೇ ಕಾನೂನು ಬಂದ ಮೇಲೆ ಎಲ್ಲರೂ ತಮ್ಮ ತಮ್ಮ ಪಕ್ಷದವರನ್ನೇ ನೇಮಿಸಿದ್ದಾರೆ. ಆದರೆ ನೇಮಿಸುವಾಗ ಕಮಿಟೆಡ್ ಜನರನ್ನು ನೇಮಿಸಬೇಕು. ಈ ಒಂದು ಕಾನೂನಿನ ಮೇಲೆ ಯಾರಿಗೆ ಆಸಕ್ತಿ ಇದೆ. ಈ ಪ್ರೋಗ್ರಾಮ್ ಮೇಲೆ ಯಾರಿಗೆ ಭಕ್ತಿ ಇದೆ. ಅಂಥವರನ್ನು ನೇಮಿಸತಕ್ಕದ್ದು ನಮ್ಮ ಕರ್ತವ್ಯ. ಎಲ್ಲಾ ಸದಸ್ಯರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ ತಾವು ಸಲಹೆ ಕೊಡುವಾಗ ಸ್ವಲ್ಪ ಒಳ್ಳೆಯ ಕಾರ್ಯಕರ್ತರನ್ನು ಕಮಿಟೆಡ್ ಕಾರ್ಯಕರ್ತರನ್ನು ಕೊಟ್ಟರೆ ಅದು ಯಶಸ್ವಿಯಾಗುತ್ತದೆ. ಕಾನೂನು ಎಷ್ಟೇ ಒಳ್ಳೆಯದಿದ್ದರೂ ಕೂಡ ಕಾನೂನು ನಡೆಸಿಕೊಂಡು ಹೋಗತಕ್ಕ ಜನ ಸರಿಯಾಗಿಲ್ಲದೇ ಹೋದರೆ ಕಾನೂನು ಕೂಡ ಕೆಟ್ಟದ್ದಾಗುತ್ತದೆ. ಅದಕ್ಕೆ ನಾವು ಮತ ಹಾಕುವಾಗ ನೋಡಿ ಹಾಕಬೇಕು. ತಮ್ಮಗೆಲ್ಲಾ ಗೊತ್ತಿದೆ ಪ್ರಜಾಪ್ರಭುತ್ವದಲ್ಲಿ ನಾವು ನೀವು ಎಲ್ಲರೂ ಕೂಡಿ ಅನೇಕ ಸಾರಿ ಒತ್ತಡಕ್ಕೆ ಮಣಿಯುತ್ತೇವೆ. ನಾವು ಇಲ್ಲ ಎಂದು ಹೇಳಿಕೊಳ್ಳಬಹುದು. ನಾನೂ ಕೂಡ ಒತ್ತಡಕ್ಕೆ ಮಣಿಯುತ್ತೇವೆ. ನಮ್ಮ ಪಕ್ಷದವರು ಹೇಳುತ್ತಾರೆ. ಶಾಸಕರು ಹೇಳುತ್ತಾರೆ. ನೀವು ಅಧಿಕಾರಕ್ಕೆ ಬಂದಾಗ ನೀವು ಹೇಳಿದ್ದನ್ನು ಮಂತ್ರಿಗಳು ಕೇಳುತ್ತಾರೆ. ಮುಖ್ಯಮಂತ್ರಿಗಳು ಕೇಳುತ್ತಾರೆ. ಕೇಳುವುದಿಲ್ಲವೇ? ಆದರೆ ನಾವು ಅದಷ್ಟು ಪ್ರಾಮಾಣಿಕತೆಯಿಂದ ಒಂದು ಕಾನೂನನ್ನು ತರುವುದಕ್ಕೆ ಪ್ರಯತ್ನ ಮಾಡತಕ್ಕದ್ದು ನಮ್ಮ ಕರ್ತವ್ಯ. ಇವತ್ತು ತಹಶೀಲ್ದಾರರಿಗೆ ನಾವು ಮೆಂಬರ್ ಸೆಕ್ರೆಟರಿ, ಏತಕ್ಕೆ ಮಾಡುತ್ತೇವೆಂದರೆ ಕಾನೂನು ಸಲಹೆ ಕೊಡತಕ್ಕದ್ದು ಇರಲಿ. ನಾಳೆ ಏನಾದರೂ ಆತ ಡಿಸ್ಸೆಂಟ್ ನೋಟ್ ಹಾಕಬೇಕಾದರೆ ಸದಸ್ಯನಾಗಿ ಹಾಕಿದರೆ ಬೆಲೆ ಇರುತ್ತದೆ. ಬರೀ ಸೆಕ್ರೆಟರಿಯಾಗಿ ಆತ ಹೇಳತಕ್ಕದ್ದನ್ನು ಆತ ಹೇಳಿ ಸುಮ್ಮನೆ ಕುಳಿತುಕೊಳ್ಳಬಹುದು. ಇವರು 3 ಜನರು ಕಾನೂನಿಗೆ ವಿರುದ್ಧವಾದ ಡಿಸಿಷನ್ ತೆಗೆದುಕೊಳ್ಳಬಹುದು. ಅದಕ್ಕೆ ಒಬ್ಬ ಅಫಿಶಿಯಲ್ ಕಾನೂನು ಅರ್ಥಮಾಡಿಕೊಂಡು ಅವರಿಗೆ ಗೈಡ್ ಮಾಡಬೇಕೆಂದು. ಇವರು ಒಟ್ಟು ನಾಲ್ಕು ಜನ ಆದಾಗ ಇಬ್ಬಿಬ್ಬರು ಒಂದು ವಿಷಯದ ಪರ ಹಾಗೂ ವಿರೋಧ ಆದಾಗ 50 ಪರ್ಸೆಂಟ್ ಹಾಗೂ 50 ಪರ್ಸೆಂಟ್ ಈ ಕಡೆ ಆಗುತ್ತದೆ. ಲ್ಯಾಂಡ್ ಟ್ರಿಬ್ಯುನಲ್ಸ್‌ನಲ್ಲಿ ಯಾವ ರೀತಿ 4 ಜನ ನಾನ್ ಅಫಿಶಿಯಲ್ಸ್ ಹಾಗೂ ಒಬ್ಬರು ಅಫಿಶಿಯಲ್ ಇದ್ದಾರೋ, ಲ್ಯಾಂಡ್ ಗ್ರಾಂಟ್ ಕಮಿಟಿಯಲ್ಲಿ ಕೂಡ ಇದೇ ಪ್ರಮಾಣದಲ್ಲಿ ಏನು ಇದ್ದಾರೋ ಅದೇ ರೀತಿ ಇಲ್ಲಿ 4ಜನ ಇರುತ್ತಾರೆ. ಇದೇನೂ ಹೊಸದು ಅಲ್ಲ. ಇಲ್ಲಿ ಯಾರಿಗೇ ಅಕಾಮಡೇಟ್ ಮಾಡಬೇಕೆಂದಲ್ಲ. ಪಕ್ಷದ ಕಾರ್ಯಕರ್ತರನ್ನು ನಾವು ತರಬೇಕೆಂದು ಇದನ್ನು ತಂದಿಲ್ಲ. ಕಾನೂನಿನಿಂದ ಜನರಿಗೆ ಸಹಾಯವಾಗಬೇಕೆಂದು. ಕಾನೂನು ತ್ವರಿತವಾಗಿ ಆಗಬೇಕೆಂದು ತಂದಿದ್ದೇವೆ. ಇದರ ಅಡಿಯಲ್ಲಿ ನಾಮಿನೇಷನ್ ಮಾಡುವಾಗ ನ್ಯಾಚುರಲಿ ಪಕ್ಷದ ಕಾರ್ಯಕರ್ತರು ಬರುತ್ತಾರೆ. ಅದನ್ನು ಯಾರೂ ಅವಾಯ್ಡ್ ಮಾಡುವುದಕ್ಕಾಗುವುದಿಲ್ಲ. ಅದನ್ನು ತಾವೂ ಒಪ್ಪಿಕೊಳ್ಳುತ್ತೀರಿ. ಮುಖ್ಯ ಉದ್ದೇಶ ಏನೆಂದರೆ, ಗುರಿ ಏನೆಂದರೆ, ಈ ರೆಗ್ಯುಲರೈಸೇಷನ್ ಮಾಡುವಾಗ ಸರಿಯಾದ ರೀತಿಯಲ್ಲಿ ಆಗಬೇಕು. ತೀವ್ರಗತಿಯಲ್ಲಿ ಆಗಬೇಕೆನ್ನುವ ದೃಷ್ಟಿಯಿಂದ ತಿದ್ದುಪಡಿ ತಂದಿದ್ದೇವೆಯೇ ಹೊರತು ನಮ್ಮ ಪಕ್ಷದ ಕಾರ್ಯಕರ್ತರನ್ನು ಅಕಾಮಡೇಟ್ ಮಾಡುವ ದೃಷ್ಟಿಯಿಂದ ತಂದಿಲ್ಲವೆಂದು ನಾನು ಸ್ಪಷ್ಟಪಡಿಸುತ್ತೇನೆ. ನೇಮಕ ಮಾಡುವಾಗ ಒಳ್ಳೆಯ ಕಾರ್ಯಕರ್ತರನ್ನು ಹಾಕಬೇಕು. ಮತ್ತು ಯಾರು

ಆಸಕ್ತಿ ಇಟ್ಟುಕೊಂಡಿದ್ದಾರೆ ಅವರನ್ನು ಸೇರಿಸಬೇಕೆಂದು ಹೇಳುತ್ತೇನೆ. ವಿರೋಧ ಪಕ್ಷದ ಎಲ್ಲಾ ಶಾಸಕರೂ ಈ ಸಮಯದಲ್ಲಿ ಇರುತ್ತಾರೆ. ಅವರೂ ಕೂಡ ಅಧ್ಯಕ್ಷರಾಗಿರುತ್ತಾರೆ. ಹಿಂದಿನ ಸರ್ಕಾರದಲ್ಲಿ ನೀವು ಶಾಸಕರನ್ನೇ ತೆಗೆದುಹಾಕಿಬಿಟ್ಟಿದ್ದಿರಿ. ನಾವು ನಿಮಗೆ ಛೇರ್ಮನ್ ಮಾಡಿದ್ದೇವೆ. ಎರಡು ಜನರ ಬಗ್ಗೆ ಹೇಳಿದಿರಿ. ಕೆಲವು ಕಡೆ ಕಾಸ್ಟ್ ಕಾಂಬಿನೇಷನ್ ಮಾಡುವಾಗ ಬ್ಯಾಕ್‌ವರ್ಡ್ ಕ್ಲಾಸ್, ಮೈನಾರಿಟೀಸ್, ಷೆಡ್ಯೂಲ್ಡ್ ಕಾಸ್ಟ್‌ನವರನ್ನು ಹಾಕಬೇಕಾಗುತ್ತದೆ. ಅನೇಕ ಸಲ ಒಂದೇ ತಾಲ್ಲೂಕಿನಲ್ಲಿ ಒಂದೇ ಕಮ್ಯುನಿಟಿಯವರು 2-3 ಜನರು ಬರುತ್ತಾರೆ. ಆಗ ಒಬ್ಬರನ್ನು ತೆಗೆದು ಲ್ಯಾಂಡ್ ಗ್ರಾಂಟ್ ಕಮಿಟಿಗೋ, ಲ್ಯಾಂಡ್ ಟ್ರಿಬ್ಯುನಲ್ ಕಮಿಟ್‌ಗೋ, ಕನ್‌ಸಲ್ಟೇಷನ್ ಕಮಿಟಿಗೋ ಹಾಕಬೇಕಾಗುತ್ತದೆ. ಒಂದೇ ಕಮ್ಯುನಿಟಿಯವರು 2-3 ಜನರು ಇದ್ದಾಗ ಸ್ವಲ್ಪ ಸರಿಯಾಗುವುದಿಲ್ಲ, ಎನ್ನುವ ದೃಷ್ಟಿಯಿಂದ ಅವಾಯ್ಡ್ ಮಾಡಿದ್ದೇವೆ. ಎಲ್ಲಾದರೂ ನ್ಯಾಫ್ಲು ಪರ್‌ಪಸ್‌ಫುಲಿ ತೆಗೆಯಬೇಕೆಂದು, ವಿರೋಧ ಪಕ್ಷದಲ್ಲಿ ಇರುವವರಿಗೆ ಕೊಡಬಾರದು ಎಂದು ನಾವು ಮಾಡಿಲ್ಲ. ಹಾಗೆ ಮಾಡುವುದೂ ಇಲ್ಲ. ಎಲ್ಲಾ ಎಂ.ಎಲ್.ಎ.ಗಳನ್ನು ಛೇರ್ಮನ್ ಮಾಡುತ್ತೇವೆ. ಅವರ ಮುಖಾಂತರ ರಾಜ್ಯದಲ್ಲಿ ಈ ಕಾನೂನನ್ನು ಜಾರಿಗೆ ತರುವುದಕ್ಕೆ ವ್ಯವಸ್ಥೆಯಾಗುತ್ತದೆಂದು ತಮ್ಮ ಮುಖಾಂತರ ಪೇಳಿ ಇದಕ್ಕೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಮಾನ್ಯ ಖಿರ್ಗೆಯವರ ವಿಚಾರವನ್ನು ತತ್ವಶಹ ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ ನಮ್ಮ ಎಲ್ಲಾ ವಿರೋಧ ಪಕ್ಷದ ಸದಸ್ಯರು ಕೂಡ ಮಾತನಾಡಿ ಇಂತಹ ಒಂದು ವಿಚಾರ ಕೇವಲ ಇವರ ಪಕ್ಷಕ್ಕೆ, ಚುನಾವಣೆ ಬಂದಿದೆ ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು, ಕಾರ್ಯಕರ್ತರನ್ನು ಸಂತೋಷಪಡಿಸುವುದಕ್ಕೆ 3 ಜನ ಇರುವ ವ್ಯವಸ್ಥೆಯಲ್ಲಿ 5 ಜನರನ್ನು ಮಾಡುವ ಒಂದು ತಿದ್ದುಪಡಿಯನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಇದಕ್ಕೆ 20 ಲಕ್ಷ ಟಿ.ಎ. ಎಂದು ಮಾನ್ಯ ಸದಸ್ಯರು ಹೇಳಿದರು. ಒಂದು ಕಡೆ ಹಣ ಇಲ್ಲ, ಹಣ ಇಲ್ಲ ಎಂದು ಹೇಳುತ್ತೀರಿ. ಇನ್ನೊಂದು ಕಡೆ 2 ಜನ ಮೆಂಬರ್ಸ್‌ಗೆ ಟಿ.ಎ. ಜಾಸ್ತಿ ಮಾಡುವುದಕ್ಕೆ ಏಕೆ ಹೊರಟಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ : ಇಲ್ಲ ಇದು ಟೋಟಲ್ ಎರಡು ಜನರಿಗೋಸ್ಕರ ಇದು ಬರುವುದಿಲ್ಲ. ನಾವು ಯಾರಿಗೂ ಪ್ರಯೋಜನ ಮಾಡಬೇಕೆನ್ನತಕ್ಕದ್ದು ಇಲ್ಲ. ಬೇಕಾದರೆ ತಾವು ವಿತ್‌ಡ್ರಾ ಮಾಡಿ ಎಂದರೆ ನಾನು ವಿತ್‌ಡ್ರಾ ಮಾಡುತ್ತೇನೆ. ತಹಶೀಲ್ದಾರ್ ಮೆಂಬರ್ ಸೆಕ್ರೆಟರಿ ಆಗದೇ ಹೋದರೆ ಎಫೆಕ್ಟ್ ಬರುವುದಿಲ್ಲ, ಎನ್ನುವ ದೃಷ್ಟಿಯಿಂದ ಮಾಡಿದ್ದೇವೆಯೇ ಹೊರತು ಇದರಿಂದ ತೊಂದರೆ ಆಗುವುದಿಲ್ಲ. ಇವತ್ತು ಕೆಲವು ಕಡೆ ಒಬ್ಬರು ಇದ್ದಾರೆ. ಇದು ನಮಗೆ ಗೊತ್ತಿದೆ. ಕೆಲವು ಲ್ಯಾಂಡ್‌ಟ್ರಿಬ್ಯುನಲ್‌ನಲ್ಲಿ ಅಸಿಸ್ಟೆಂಟ್ ಕಮಿಷನರ್ ಡಿಸ್ಸೆಂಟ್ ನೋಟ್ ಕೊಟ್ಟು ಮತ್ತೆ ಎಲ್ಲಾ ಮೆಂಬರ್ಸ್ ಒಂದು ಕಡೆ ಆಗಿದ್ದಂತಹ ನಿದರ್ಶನಗಳು ತಮಗೆ ಗೊತ್ತಿರಬಹುದು. ಅದಕ್ಕೆ ಆ ಒಂದು ವೈಟೇಜ್ ಬರಲಿ ಎನ್ನುವ ದೃಷ್ಟಿಯಿಂದ ಮಾಡಿದ್ದೇವೆಯೇ ಹೊರತು ಮೆಂಬರ್ಸ್ ಹೆಚ್ಚು ಮಾಡಿ, ನಮ್ಮ ಪಕ್ಷದವರಿಗೆ ಕೊಡಬೇಕೆಂದು ಮಾಡಿದ್ದುದು ಅಲ್ಲ. ಹಾಗೆಂದಿದ್ದರೆ ಎಂಎಲ್‌ಎ ಛೇರ್ಮನ್ ಮಾಡುತ್ತಾ ಇರಲಿಲ್ಲ. ನ್ಯಾಯ ಸಿಗಲಿ ಎಂದು ನಾವು ಮಾಡಿದ್ದೇವೆ. ನಾವು ಎಲ್ಲಾ ಕಮಿಟಿಗಳ ಅಂದಾಜು ಖರ್ಚನ್ನು ತೋರಿಸಿದ್ದೇವಷ್ಟೇ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಾಗಾದರೆ ಒಂದು ಅಮೆಂಡ್‌ಮೆಂಟ್‌ನ್ನು ತೆಗೆದುಕೊಂಡು ಬನ್ನಿ. ಹಿಂದೆ ಇದ್ದಂತಹ ಕಮಿಟಿಗೆ ತಹಸೀಲ್ದಾರರು ಮೆಂಬರ್ ಸೆಕ್ರೆಟರಿಯಾಗಿ ಇದ್ದರು ಅವರನ್ನು ತೆಗೆದುಕೊಳ್ಳುವ ಬಗ್ಗೆ ಅಮೆಂಡ್‌ಮೆಂಟ್ ತೆಗೆದುಕೊಂಡು ಬನ್ನಿ. ಆಗ ಇದರಲ್ಲಿ ರಾಜಕೀಯ ದುರುದ್ದೇಶವಿಲ್ಲವೆಂದು ಒಪ್ಪಿಕೊಳ್ಳುತ್ತೇವೆ. ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುತ್ತಿದ್ದೀರಿ. 180 ಜನ ಗೆದ್ದು ಬಂದಿದ್ದೀರಿ ಮಾಡುತ್ತೀರಿ ನಿಮಗೇನು

ತೊಂದರೆಯಾಗುತ್ತದೆ ಆದರಿಂದ ನಿಮ್ಮ ಕಡೆಯವರೇ ಇದ್ದಾರೆ. ಇದರಲ್ಲಿ ಒಪ್ಪಿಕೊಳ್ಳುವುದೇನಿದೆ. ಇಲ್ಲಿ ನಮಗೆ ಮೆಜಾರಿಟಿ ಇಲ್ಲ. ಆದರೆ ನಾವು ಇದನ್ನು ವಿರೋಧಿಸಬೇಕಾಗುತ್ತದೆ. ಇದನ್ನು ವಿತ್‌ಡ್ರಾ ಮಾಡಿ ಮುಂದಿನ ಅಧಿವೇಶನದಲ್ಲಿ ತನ್ನಿ ಅದರ ಬಗ್ಗೆ ವಿಚಾರ ಮಾಡೋಣ ಚುನಾವಣೆ ಮುಂದಿಟ್ಟು ಕೊಂಡು ಇದನ್ನು ಏಕೆ ಮಾಡುವುದಕ್ಕೆ ಹೊರಟಿದ್ದೀರಿ?

ಶ್ರೀ ಜೆ.ಎಸ್. ಶಿವನಂಜಪ್ಪ : ನೀವು ಇದ್ದಾಗ ಏನು ಮಾಡಿದಿರಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ. : ಉತ್ತರ ಹೇಳುವುದಕ್ಕೆ ತಾವೇನು ಮಂತ್ರಿಯಾಗಿದ್ದೀರಾ?

ಶ್ರೀ ಆರ್. ದಯಾನಂದರಾವ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು

(ಗೊಂದಲ)

ಶ್ರೀ ಜೆ.ಎಸ್. ಶಿವನಂಜಪ್ಪ : ಹಿಂದೆ ನೀವು ಇದ್ದಾಗ ಟ್ರಿಬ್ಯುನಲ್‌ಗೆ ಬಂಗಾರಪ್ಪನವರನ್ನು ಮೆಂಬರ್ ಮಾಡಲಿಲ್ಲ. ನೀವಿದ್ದಾಗ ಹಾಗೇ ನಮ್ಮನ್ನು ಕರೆದೂ ಕೂಡಿಸಿದ್ದೀರಾ? 180 ಜನ ಗೆದ್ದು ಬಂದಿದ್ದೇವೆ. ಮಾಡುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಶಿವನಂಜಪ್ಪನವರಿಂದ ಎಕ್ಸ್‌ಪ್ಲನೇಷನ್ ಕೇಳಲಿಲ್ಲ. ನಾನು ಸರಕಾರದಿಂದ, ಕಂದಾಯ ಮಂತ್ರಿಗಳಿಂದ ಕೇಳುತ್ತಿದ್ದೇನೆ. ತಾವು ನನಗೆ ಅವಕಾಶ ಕೊಟ್ಟಿದ್ದೀರಿ. ಶಿವನಂಜಪ್ಪನವರಿಂದಾಗಲೀ, ದಯಾನಂದರಾವ್‌ರವರಿಂದಾಗಲೀ ನಾನು ಎಕ್ಸ್‌ಪ್ಲನೇಷನ್ ಕೇಳಲಿಲ್ಲ.

ಶ್ರೀ ಜೆ.ಎಸ್. ಶಿವನಂಜಪ್ಪ : ನಿಮ್ಮ ಸರಕಾರವಿದ್ದಾಗ ಏನು ಮಾಡಿದಿರಿ ಎಂದು ಎಲ್ಲರಿಗೂ ಗೊತ್ತು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಶಿವನಂಜಪ್ಪ ಎಲ್ಲಿದ್ದರು ಯಾವ ಕಡೆ ಹೋಗುತ್ತಾರೆ ಮತ್ತೆ ಎಲ್ಲಿ ಹೋಗುತ್ತಾರೆನ್ನುವುದೂ ಕೂಡ ಗೊತ್ತು ಅದೆಲ್ಲಾ ಈಗ ಬೇಡ.

(ಗೊಂದಲ)

ಶ್ರೀ ಜೆ.ಎಸ್. ಶಿವನಂಜಪ್ಪ : ತಾವು ಎಲ್ಲಿಂದ ಬಂದಿದ್ದೀರಿ ಹೇಗಿದ್ದಿರಿ ಎಂಬುದು ನಮಗೂ ಗೊತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : 1978ರಲ್ಲಿ ಯಾವ ಪಾರ್ಟಿಗೆ ಹೋದಿರಿ ಏನು ಎಂಬುದೆಲ್ಲಾ ಗೊತ್ತಿರತಕ್ಕಂತಹ ವಿಚಾರ. ದೊಡ್ಡವರೆಂದು ಯೀಲ್ಡ್ ಆದದ್ದೇ ಅದು ತಪ್ಪಾಯಿತು. ನಾನು ಮಾನ್ಯ ಮುಂತ್ರಿಗಳಲ್ಲಿ ಮತ್ತೊಮ್ಮೆ ಮನವಿ ಮಾಡುತ್ತೇನೆ. ಹಿಂದೆ ಯಾವ ರೀತಿ ಲ್ಯಾಂಡ್ ಗ್ರಾಂಟ್ ಕಮಿಟಿ ಇದೆ ಅದರ ಪ್ರಕಾರ ಇರಲಿ, ಬಡವರಿಗೆ ಸಹಾಯ ಮಾಡಬೇಕೆಂಬ ಇಚ್ಛೆ ಇದ್ದರೆ ಅವರನ್ನು ಮೆಂಬರ್ ಸೆಕ್ರೆಟರಿಯನ್ನಾಗಿ ಮಾಡಿ. ನಾವೂ ಸಹಾ ಎಲ್ಲಾ ಬಿಲ್‌ಗಳಿಗೆ ಸಪೋರ್ಟ್ ಮಾಡಿದ ರೀತಿಯಲ್ಲಿ ಮಾಡುತ್ತೇವೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ನಾನು ಹೇಳಿದ್ದೇನೆ ಇದರಲ್ಲಿ ಯಾವುದೇ ದುರುದ್ದೇಶ ಇಲ್ಲ. ಇದು ಅವರ ತಲೆಗೆ ಹೇಗೆ ಬಂತೋ ನನಗೆ ಗೊತ್ತಿಲ್ಲ. ಅಲ್ಲಿ ಇವರನ್ನು ಮೆಂಬರ್ ಸೆಕ್ರೆಟರಿಯನ್ನಾಗಿ ಮಾಡಿದರೆ ಒಬ್ಬರೇ ಸದಸ್ಯರಿರುತ್ತಾರೆ. ಎಸ್‌ಸಿಗೆ ಹಿಂದುಳಿದವರಿಗೆ ಮೈನಾರೀಟೀಸ್ ಅನ್ನು ಹಾಕಬೇಕಾಗುತ್ತದೆ.

ಈ ಕಾಂಪೋಜಿಷನ್ ರೀಟೇನ್ ಆಗುತ್ತದೆ. ತಹಸೀಲ್ದಾರರಿಗೆ ಮೆಂಬರ್ ಸೆಕ್ರೆಟರಿಯನ್ನನಾಗಿ ಮಾಡಿದರೆ ಎಫೆಕ್ಟೀವ್ ಆಗುತ್ತದೆನ್ನುವ ದೃಷ್ಟಿಯಿಂದ ಹಾಕಿದ್ದೇವೇಯೆ ಹೊರತು ಬೇರೇನೂ ಇಲ್ಲ. ಯಾವ ಪಾರ್ಟಿಯವರು ಬಂದರೂ ಕೂಡ ತಮ್ಮ ಸದಸ್ಯರನ್ನು ಬಿಟ್ಟು ಬೇರೆಯವರನ್ನು ಮಾಡುತ್ತಾರೆ ಹೇಳಿ. ಸುಮ್ಮನೆ ಅದನ್ನೇ ದೊಡ್ಡದಾಗಿ ಮಾಡಿದರೆ ಅದರಲ್ಲಿ ಅರ್ಥವೇನೂ ಕಾಣುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಎಲ್ಲಾ ಜಾತೀಯವರಿಗೂ ಸಿಗಬೇಕೆಂಬ ದೃಷ್ಟಿಯಿಂದ 20 ಮಾಡಿ.

ಶ್ರೀ ಆರ್. ದಯಾನಂದರಾವ್ : 6ವರ್ಷ ಜನತಾ ಸರಕಾರ ಇತ್ತು ಯಾವ ಒಂದು ಕಾರ್ಯಕ್ರಮವನ್ನೂ ಕೂಡ ಮಾಡಲಿಲ್ಲ. ಲ್ಯಾಂಡ್ ಸೀಲಿಂಗ್, ಲ್ಯಾಂಡ್ ರಿಫಾರ್ಮ್ ಆಕ್ಟ್‌ನಲ್ಲಿ ಮಾಡಲಿಲ್ಲ. ಅದನ್ನು ನಿಲ್ಲಿಸಿ ಬಿಟ್ಟಿದ್ದರು. ಅದನ್ನು ನಾವು ಜಾರಿಗೆ ತಂದೆವು. ಸಮಾಜವಾದದ ಕಾರ್ಯಕ್ರಮಗಳನ್ನು ಇವತ್ತು ನಮ್ಮ ಮಂತ್ರಿಗಳು ಮಾಡುತ್ತಿದ್ದಾರೆ. ಅದಕ್ಕೆ ವಿರೋಧ ಮಾಡುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

ಶ್ರೀ ಬಿ.ಎಚ್. ಬನ್ನಿಕೋಡ್ : ಈಗ ತಂದಿರತಕ್ಕಂತಹ ತಿದ್ದುಪಡಿಗೂ ಅವರು ಹೇಳುವುದಕ್ಕೂ ಸಂಬಂಧವಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ವಿಧಾನ ಸಭಾ ಸದಸ್ಯರು ಮಂತ್ರಿ ಅಥವಾ ಮುಖ್ಯಮಂತ್ರಿಗಳು, ರಾಜ್ಯ ಮಂತ್ರಿಗಳಾಗಿದ್ದಾರೆ. ಆಯಾಯ ತಾಲ್ಲೂಕುಗಳಿಗೆ ಯಾರನ್ನು ಅಧ್ಯಕ್ಷರನ್ನಾಗಿ ಮಾಡುತ್ತಾರೆ. ಈ ಬಿಲ್‌ನಲ್ಲಿ ಅದನ್ನು ಹೇಳಲಿಲ್ಲ. ಏಕೆಂದರೆ ಅದರ ಬಗ್ಗೆ ಇದರಲ್ಲಿ ಏನೂ ಇಲ್ಲ. ಇವತ್ತು ವಿಧಾನಸಭಾ ಸದಸ್ಯರಾಗಿರುತ್ತಾರೆ. ನಾಳೆ ಮಂತ್ರಿಯಾಗಬಹುದು, ಮುಖ್ಯಮಂತ್ರಿಯಾಗಬಹುದು. ಅಂತಹವರು ಅಧ್ಯಕ್ಷರಾಗಿರುತ್ತಾರೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅದನ್ನು ನಾವು ರೂಲ್ಸ್‌ನಲ್ಲಿ ಮಾಡಿಕೊಂಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೇ, ಎಲ್ಲಾ ಕಡೆ ಜಾಸ್ತಿ ಮಾಡುತ್ತೇವೆಂದು ನಾಮಿನೇಷನ್ ಜಾಸ್ತಿ ಮಾಡಿ. ಚುನಾವಣಾ ದೃಷ್ಟಿಯಿಂದ ನಾಮಿನೇಷನ್ ಜಾಸ್ತಿ ಮಾಡಿಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: I will tell you frankly, ಇದು ಚುನಾವಣಾ ದೃಷ್ಟಿಯಿಂದಲ್ಲ. ಇಲ್ಲಿ ನಮ್ಮ ಕಮಿಟ್‌ಮೆಂಟ್ ಇದೆ. ಅದಕ್ಕೋಸ್ಕರ ನಾವು ಮಾಡುತ್ತಿದ್ದೇವೆ. ಈಗಾಗಲೇ ಯಾರು ಯಾರು ಹೆಸರುಗಳನ್ನು ಕೊಟ್ಟಿದ್ದಾರೆ ಅಂತಹ ಕಡೆಗಳಲ್ಲಿ ಕಮಿಟಿಗಳನ್ನು ರಚನೆ ಮಾಡಿದ್ದೇವೆ. ಉಳಿದ ಕಡೆ ಆದಷ್ಟು ಬೇಗ ಮಾಡುತ್ತೇವೆ. ಬಡವರು ಹತ್ತಾರು ವರ್ಷಗಳಿಂದ ನಮಗೆ ಪಟ್ಟಾ ಸಿಗುತ್ತದೆ. ಕಾಯ್ದು ಕುಳಿತುಕೊಂಡಿದ್ದಾರೆ. ಅದರ ಮೇಲೆ ನಾವು ಸಾಲ ಮಾಡಿ ಇಂಪ್ರೂವ್‌ಮೆಂಟ್ ಮಾಡಿಕೊಳ್ಳಬಹುದು ಎನ್ನತಕ್ಕ ಕಳಕಳಿಯಿದೆ.

ಶ್ರೀ ವಾಟಾಳ್ ನಾಗರಾಜ್: ಸಮಿತಿಯನ್ನು ಮಾಡುತ್ತೇವೆಂದು ನೀವು ಯಾರನ್ನು ಕೇಳಿದ್ದೀರಿ? ನಮ್ಮನ್ನು ನೀವು ಕೇಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಸ್ವಲ್ಪ ನಾನು ಹೇಳುವುದನ್ನು ಕೇಳಿ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ರಾಜಕೀಯ ದುರುದ್ದೇಶದಿಂದ, ಬರೀ ಕಾಂಗ್ರೆಸ್ ಪಕ್ಷಕ್ಕೋಸ್ಕರ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ಖಂಡಿತವಾಗಿಯೂ ಆ ರೀತಿ ಇಲ್ಲ, ನಮ್ಮ ಇಂಟೆನ್‌ಷನ್ ಆ ರೀತಿ ಇಲ್ಲ, ತಾವು ಬೇಕಾದರೆ ಇದನ್ನು ವಿರೋಧ ಮಾಡುವುದು ಇದ್ದರೆ ಮಾಡಿ. ನಾವು ಪ್ರಾಮಾಣಿಕವಾಗಿ ರಾಜ್ಯದ ಜನರಿಗೆ ಸಹಾಯ ಮಾಡಬೇಕೆನ್ನುವ ದೃಷ್ಟಿಯಿಂದ ಇದನ್ನು ತಂದಿದ್ದೇವೆ ಹೊರತಾಗಿ

ನಮ್ಮ ಪಕ್ಷವನ್ನು ಬೆಳೆಸಬೇಕು ಎಂದು ತಂದಿಲ್ಲ, ಇದರಿಂದ ನಮ್ಮ ಪಕ್ಷ ಬೆಳೆಯುವುದಿಲ್ಲ. ನೂರು ಜನರನ್ನು ಕಮಿಟಿಯಲ್ಲಿ ಹಾಕಿದರೆ ನಮ್ಮ ಪಕ್ಷ ಬೆಳೆಯುವುದಿಲ್ಲ. ಬೆಳೆಯುವುದು ಇದ್ದರೆ ಬೆಳೆಯುತ್ತದೆ ಇಲ್ಲದಿದ್ದರೆ ಇಲ್ಲ. ಅದರ ಬಗ್ಗೆ ಜನ ತೀರ್ಮಾನ ಮಾಡುತ್ತಾರೆ. ಇದು ಮೆಂಬರ್ಸ್‌ಗಳ ಮೇಲೆ ತೀರ್ಮಾನವಾಗುವುದಿಲ್ಲ.

ಉಪಾಧ್ಯಕ್ಷರು: ಮಾನ್ಯ ಮಂತ್ರಿಗಳು ಈಲ್ಡ್ ಆಗಿಲ್ಲ, ತಾವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇದನ್ನು ರೆಗ್ಯುಲರೈಸ್ ಮಾಡಬೇಕೆಂದು ಬಹಳ ವರ್ಷಗಳಿಂದ ನೆನಗುದಿಗೆ ಬಿದ್ದಿತ್ತು. ರೈತಸಂಘದವರು ದಲಿತ ಸಮಿತಿಯವರು, ಈ ಸದನದ ಸದಸ್ಯರೆಲ್ಲರೂ ಕೂಡ ಹೇಳಿದ್ದಾರೆ. ಇದನ್ನು ಸಕ್ರಮಗೊಳಿಸಬೇಕೆಂದು ಹೇಳಿದ್ದಾರೆ. ಅದನ್ನು ಮಾಡುವಾಗ ತಾವು ಸಹಕಾರವನ್ನು ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರುಗಳಲ್ಲಿ ಕೇಳಿಕೊಳ್ಳುತ್ತೇನೆ ಮತ್ತು ಈ ವಿಧೇಯಕಕ್ಕೆ ಸಮ್ಮತಿ ನೀಡಬೇಕೆಂದು ಕೋರುತ್ತೇವೆ.

ಉಪಾಧ್ಯಕ್ಷರು: ಪ್ರಸ್ತಾಪ ಏನೆಂದರೆ "1991ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು: ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 2

(ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು; ಪ್ರಸ್ತಾವ ಏನೆಂದರೆ ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) : 1991ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿದೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "1991ರ ಕರ್ನಾಟಕ ಭೂ ಕಂದಾಯ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.